ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	:	ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	288
ಉತ್ತರಿಸಬೇಕಾದ ದಿನಾಂಕ	:	09.12.2020
ಉತ್ತರಿಸುವ ಸಚಿವರು	:	ವಸತಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಪ್ರಧಾನ ಮಂತ್ರಿ ಆವಾಸ್ ಯೋಜನೆ (ಪಿಎಂಎವೈ) ಯಡಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ನಿರ್ಮಿಸಲಾಗುತ್ತಿರುವ ಪ್ರತಿ ವಸತಿ ಘಟಕ ನಿರ್ಮಾಣದ ವೆಚ್ಚವೆಷ್ಟು;	ಪ್ರಧಾನ ಮಂತ್ರಿ ಆವಾಸ್ ಯೋಜನೆ ಮತ್ತು ಇತರೆ ವಸತಿ ಯೋಜನೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ನೀಡುತ್ತಿರುವ ಸಹಾಯಧನದ ವಿವರ ಈ ಕೆಳಗಿನಂತಿದೆ:-

(ರೂ. ಲಕ್ಷಗಳಲ್ಲಿ)

ಯೋಜನೆ	ಗ್ರಾಮೀಣ ಯೋಜನೆ			
	ಕೇಂದ್ರದ ಪಾಲು		ರಾಜ್ಯದ ಪಾಲು	
	ಸಾಮಾನ್ಯ / ಅ.ಸಂ	ಪ.ಜಾ. / ಪ.ಪಂ.	ಸಾಮಾನ್ಯ / ಅ.ಸಂ	ಪ.ಜಾ. / ಪ.ಪಂ.
ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)	0.72	0.72	0.48	0.78
ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ	-	-	-	1.75

(ರೂ. ಲಕ್ಷಗಳಲ್ಲಿ)

ಯೋಜನೆ	ನಗರ ಯೋಜನೆ			
	ಕೇಂದ್ರದ ಪಾಲು		ರಾಜ್ಯದ ಪಾಲು	
	ಸಾಮಾನ್ಯ / ಅ.ಸಂ	ಪ.ಜಾ. / ಪ.ಪಂ	ಸಾಮಾನ್ಯ / ಅ.ಸಂ	ಪ.ಜಾ. / ಪ.ಪಂ
ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)	1.50	1.50	-	-
ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ	-	-	-	2.00
ವಾಜಪೇಯಿ ನಗರ ವಸತಿ ಯೋಜನೆ	-	-	1.20	-

ಕ್ರ. ಸಂ.	ಪ್ರಶ್ನೆ	ಉತ್ತರ
(ಆ)	ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ನಿರ್ಮಾಣದ ವೆಚ್ಚವು ವಿಭಿನ್ನವಾಗಿದೆಯೇ; ಹಾಗಿದ್ದಲ್ಲಿ, ಎರಡೂ ಪ್ರದೇಶಗಳಿಗೆ ಹಂಚಿಕೆಯನ್ನು ಸಮನಾಗಿಸಲು ಯಾವುದೇ ಯೋಜನೆಯನ್ನು ರೂಪಿಸಲಾಗಿದೆಯೇ;	ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಆವಾಸ್ (ನಗರ) ಯೋಜನೆಯನ್ನು ರಾಜ್ಯ ಸರ್ಕಾರದ ಯೋಜನೆಗಳಾದ ವಾಜಪೇಯಿ ನಗರ ವಸತಿ ಯೋಜನೆ ಮತ್ತು ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯೊಂದಿಗೆ ಸಂಯೋಜನೆಗೊಳಿಸಿ, ಅನುಷ್ಠಾನಗೊಳಿಸಲಾಗುತ್ತಿದೆ.
(ಇ)	ಉಭಯ ಪ್ರದೇಶಗಳ ನಿರ್ಮಾಣ ಸಾಮಾಗ್ರಿಗಳನ್ನು ಒಂದೇ ಸ್ಥಳದಿಂದ ತರುವುದರಿಂದ ಎರಡೂ ಪ್ರದೇಶಗಳ ಯೋಜಿತ ವೆಚ್ಚವನ್ನು ಅದೇ ನಿಯತಾಂಕಗಳಲ್ಲಿ ಅಳೆಯುವುದು ಸಾಧುವಾಗಿದ್ದು, ಈ ಬಗ್ಗೆ ಸರ್ಕಾರ ಪರಿಶೀಲಿಸುವುದೇ? (ವಿವರ ಒದಗಿಸುವುದು)	ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಜೀವನ ಶೈಲಿಯ ನಿಯತಾಂಕಗಳು ವ್ಯತ್ಯಾಸವಿದ್ದು, ವಿವಿಧ ವಸತಿ ಯೋಜನೆಗಳಡಿ ಸರ್ಕಾರದಿಂದ ಮಂಜೂರಾದ ಮನೆಗಳನ್ನು ಸ್ಥಳೀಯವಾಗಿ ಲಭ್ಯವಿರುವ ಕಚ್ಚಾ ವಸ್ತುಗಳನ್ನು ಉಪಯೋಗಿಸಿಕೊಂಡು ಫಲಾನುಭವಿಗಳೇ ಸ್ವತಃ ನಿರ್ಮಿಸಿಕೊಳ್ಳುತ್ತಿರುವುದರಿಂದ, ಯೋಜಿತ ವೆಚ್ಚವನ್ನು ಒಂದೇ ನಿಯತಾಂಕಗಳಲ್ಲಿ ಅಳೆಯುವ ವಿಚಾರ ಸರ್ಕಾರದ ಮುಂದೆ ಇರುವುದಿಲ್ಲ.

ಸಂಖ್ಯೆ :ವಇ 176 ಹೆಚ್‌ಎಫ್‌ಎ 2020

(ವಿ. ಸೋಮಣ್ಣ)
ವಸತಿ ಸಚಿವರು